ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	666
ಮಾನ್ಯ ಸದಸ್ಯರ ಹೆಸರು	:	ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು)
ವಿಷಯ	:	ರಾಯಚೂರುನಲ್ಲಿರುವ ಪ್ರಾಚೀನ ಕೋಟೆ ಅಭಿವೃದ್ಧಿ ಬಗ್ಗೆ
ಉತ್ತರಿಸುವ ದಿನಾಂಕ	:	19.02.2018
ಉತ್ತರಿಸುವ ಸಚಿವರು	:	ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು

<table>
<tr><th>ಕ್ರ. ಸ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2017-18ನೇ ಸಾಲಿನಲ್ಲಿ ಹೈದರಾಬಾದ್ ಕರ್ನಾಟಕ (ಹೈ-ಕ) ಪ್ರದೇಶಗಳಿಗೆ ನೀಡಿರುವ ಅನುದಾನ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)</td><td>2017-18ನೇ ಸಾಲಿನಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮುಂದುವರೆದ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ಅನುದಾನ ವಿವರ ಕೆಳಗಿನಂತಿದೆ.
(ರೂ.ಲಕ್ಷಗಳಲ್ಲಿ)
<table>
<tr><th>ಕ್ರ.ಸ</th><th>ಜಿಲ್ಲೆಯ ಹೆಸರು</th><th>2017-18ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ</th></tr>
<tr><td>1.</td><td>ಕಲಬುರಗಿ</td><td>561.20</td></tr>
<tr><td>2.</td><td>ಬೀದರ್</td><td>145.00</td></tr>
<tr><td>3.</td><td>ಯಾದಗಿರಿ</td><td>48.56</td></tr>
<tr><td>4.</td><td>ರಾಯಚೂರು</td><td>245.00</td></tr>
<tr><td>5.</td><td>ಬಳ್ಳಾರಿ</td><td>235.00</td></tr>
<tr><td>6.</td><td>ಕೊಪ್ಪಳ</td><td>64.05</td></tr>
<tr><td></td><td>ಒಟ್ಟು</td><td>1298.81</td></tr>
</table></td></tr>
<tr><td>ಆ)</td><td>ರಾಯಚೂರು ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿ ಮಾಡಲು ಕೈಗೆತ್ತಿಕೊಂಡಿರುವ ಪ್ರದೇಶಗಳು ಯಾವುವು;</td><td>2017-18ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಗೆ ಸಂಬಂಧಿಸಿದಂತೆ ಮಂಜೂರಾಗಿರುವ ನೂತನ ಕಾಮಗಾರಿಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.</td></tr>
</table>

ಇ)	ರಾಯಚೂರುನಲ್ಲಿರುವ ಪ್ರಾಚೀನ ಕೋಟೆ ಅಭಿವೃದ್ಧಿ ಮಾಡಲು ಸರ್ಕಾರದಿಂದ ಮಂಜೂರಾಗಿರುವ 4.5 ಕೋಟಿ ರೂಪಾಯಿಗಳ ಅನುದಾನವನ್ನು ಇಲ್ಲಿಯವರೆಗೆ ಖರ್ಚು ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ. ಪ್ರಾಚೀನ ಕೋಟೆ ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ಹೌದು. ರಾಯಚೂರು ನಗರದ ಪುರಾತನ ಕೋಟೆಯನ್ನು ಪುನಶ್ಚೇತನಗೊಳಿಸಿ ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸುವ ಕಾರ್ಯವನ್ನು ಲೋಕೋಪಯೋಗಿ ಇಲಾಖೆ ರವರ ಮೂಲಕ ಕೈಗೊಳ್ಳಲಾಗಿತ್ತು. ಸದರಿ ಕೋಟೆಯ ಸಂರಕ್ಷಣೆ ಕಾಮಗಾರಿಯನ್ನು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರಾ ಇಲಾಖೆ ರೂಪಿಸಿರುವ ಪುರಾತತ್ವ ವಿಧಿ ವಿಧಾನಗಳನುಸಾರವಾಗಿ ನಿರ್ವಹಿಸಲು ಸಾಧ್ಯವಾಗಿರುವುದಿಲ್ಲವೆಂದು ಹಾಗೂ ಕೋಟೆ ಸಂರಕ್ಷಣೆ ಕಾಮಗಾರಿಯನ್ನು ಪುರಾತತ್ವ ಇಲಾಖೆ ವತಿಯಿಂದ ನಿರ್ಮಿಸುವುದು ಸೂಕ್ತವೆಂದು ಲೋಕೋಪಯೋಗಿ ಇಲಾಖೆ ತಿಳಿಸಿರುತ್ತದೆ. ರಾಯಚೂರು ಕೋಟೆ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಹಾಗೂ ಸದರಿ ಕೋಟೆ ನವೀಕರಣ/ಸಂರಕ್ಷಣೆ ಕಾಮಗಾರಿ ಕೆಲಸವನ್ನು ನಿರ್ವಹಿಸಲು ನೈಪುಣ್ಯತೆ ಹೊಂದಿರುವುದರಿಂದ ಇವರ ಮೂಲಕವೇ ಕೈಗೊಳ್ಳಲು ಇಲಾಖೆ ತೀರ್ಮಾನಿಸಿದೆ. ಆದುದರಿಂದ ರಾಯಚೂರು ಕೋಟೆ ನವೀಕರಣ/ಸಂರಕ್ಷಣೆ ಕಾಮಗಾರಿಯನ್ನು ರೂ.450.00 ಲಕ್ಷಗಳ ಮಿತಿಯೊಳಗೆ ಅನುಷ್ಠಾನಗೊಳಿಸಲು ವಿವರವಾದ ಅಂದಾಜುಪಟ್ಟಿಯನ್ನು ಸಲ್ಲಿಸುವಂತೆ ಆಯುಕ್ತರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ರವರಿಗೆ ಪತ್ರ ಬರೆಯಯಲಾಗಿದೆ. ಅಂದಾಜು ಪಟ್ಟಿ ಬಂದ ಕೂಡಲೇ ಅಗತ್ಯ ಕ್ರಮ ವಹಿಸಲಾಗುವುದು.

ಸಂಖ್ಯೆ: ಪ್ರಇ 27 ಪ್ರವಾವಿ 2018

[ಪ್ರಿಯಾಂಕ್ ಖರ್ಗೆ]
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ಪ್ರವಾಸೋದ್ಯಮ ಸಚಿವರು

ಅನುಬಂಧ

2017-18ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಗೆ ಸಂಬಂಧಿಸಿದಂತೆ ಮಂಜೂರಾಗಿರುವ ನೂತನ ಕಾಮಗಾರಿಗಳ ವಿವರ

(ಪ್ರಶ್ನೆ ಸಂಖ್ಯೆ: 666)

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಗಳ ವಿವರ	ಸರ್ಕಾರವು ಅನುಮೋದಿಸಿರುವ ಅಂದಾಜು ಮೊತ್ತ	2017-18ನೇ ಸಾಲಿನಲ್ಲಿ ಬಿಡುಗಡೆ ಮಾಡಲು ಕಾಯ್ದಿರಿಸಿರುವ ಅನುದಾನ
	ರಾಯಚೂರು ಜಿಲ್ಲೆ		
	ರಾಯಚೂರು ತಾಲ್ಲೂಕು		
1	ರಾಯಚೂರು ನಗರದ ಮಾವಿನಕೆರೆಯನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸುವ ಕುರಿತು	25.00	10.00
2	ರಾಯಚೂರು ತಾಲ್ಲೂಕಿನ ದೇವಸೂಗುರು ಗ್ರಾಮದಲ್ಲಿರುವ ಶ್ರೀ ಸೂಗೂರೇಶ್ವರ ದೇವಸ್ಥಾನದ ಬಳಿ ಮೂಲಸೌಕರ್ಯ ಅಭಿವೃದ್ಧಿ.	25.00	10.00
	ದೇವದುರ್ಗ ತಾಲ್ಲೂಕು		
3	ದೇವದುರ್ಗ ತಾಲ್ಲೂಕಿನ ಮುಷ್ಟೂರು ಪಂಚಾಯತ್ ಜೀರದ ಬಳಿ ಬಂಡೆ ಹಣಮಂತ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ	25.00	10.00
4	ದೇವದುರ್ಗ ತಾಲೂಕಿನ ಗಬ್ಬೂರ ಗ್ರಾಮದ ಶ್ರೀ ಗುರುವಿನ ನಾಗಯ್ಯ ತಾತನ ಮಠದ ಬಳಿ ಯಾತ್ರಿನಿವಾಸ.	25.00	10.00
5	ದೇವದುರ್ಗ ತಾಲ್ಲೂಕಿನ ದೇವದುರ್ಗ ಪಟ್ಟಣದ ಶ್ರೀ ಜಯಂತ ಶಾಂತಲಿಂಗೇಶ್ವರ ಮಠದ ಬಳಿ ಯಾತ್ರಿನಿವಾಸ ನಿರ್ಮಾಣ	25.00	10.00
	ಮಾನ್ವಿ ತಾಲ್ಲೂಕು		
6	ಮಾನ್ವಿ ತಾಲ್ಲೂಕಿನ ಪಟಗಲ್ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ	50.00	20.00
7	ಮಾನ್ವಿ ತಾಲ್ಲೂಕಿನ, ದೇವಿಪುರ ಗ್ರಾಮದ ಶ್ರೀ ದ್ಯಾವಮ್ಮ ದೇವಸ್ಥಾನದ ಆವರಣದಲ್ಲಿ ಯಾತ್ರಿನಿವಾಸ ನಿರ್ಮಾಣ	25.00	10.00
8	ರಾಯಚೂರು ಜಿಲ್ಲೆಯ, ಮಾನ್ವಿ ತಾಲ್ಲೂಕಿನ ನವಲಕಲ್ಲ್ ಗ್ರಾಮದ ಶ್ರೀ ಗುರುಬ್ರಹ್ಮ ಮಠ ನವಲಕಲ್ ನಲ್ಲಿ ಯಾತ್ರಿನಿವಾಸ ನಿರ್ಮಾಣ	25.00	10.00
	ಲಿಂಗಸೂಗುರು ತಾಲ್ಲೂಕು		
9	ಲಿಂಗಸೂಗುರು ತಾಲ್ಲೂಕಿನ ಯರಡೋಣಾ ಗ್ರಾಮದ ಶ್ರೀ ಸಿದ್ಧರಾಮೇಶ್ವರ ಮಠದ ಆವರಣದಲ್ಲಿ ಯಾತ್ರಿನಿವಾಸ ನಿರ್ಮಾಣ.	25.00	10.00
	ಒಟ್ಟು	250.00	100.00